(6)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ॥ ಜಯಮಾಲ ರವರು ನಿಯಮ 330ಎ ರ ಮೇರೆಗೆ ನೀಡಿರುವ ಸೂಚನಾ ಪತ್ರಕ್ಕೆ ಸರ್ಕಾರದ ಉತ್ತರ.**

*********

ವಿಷಯ:

ವಿಶ್ವದಾದ್ಯಂತ ಚೀನಾದ ಕೊರೋನಾ ವೈರಸ್‌ಗೆ ನೂರಾರು ಜನರು ಬಲಿಯಾಗುತ್ತಿದ್ದು, ಈ ವೈರಸ್‌ಗೆ ಸೂಕ್ತ ಲಸಿಕೆ ಇನ್ನು ಸರಿಯಾಗಿ ಕಂಡು ಹಿಡಿಯಲು ಸಾಧ್ಯವಾಗದೇ ಇರುವ ಈ ಆಘಾತಕಾರಿ ಸಮಯದಲ್ಲಿ ಬೆಂಗಳೂರಿನಲ್ಲಿರುವ ಬೀದಿ ನಾಯಿಗಳಿಗೆ ಬಿ.ಬಿ.ಎಂ.ಪಿ. ವತಿಯಿಂದ ರೇಬಿಸ್ ಲಸಿಕೆಯನ್ನು ನೀಡದೇ ಇರುವುದು ಆತಂಕಕಾರಿ ವಿಷಯವಾಗಿದ್ದು, ಇದನ್ನು ಪ್ರಸ್ತಾಪಿಸಲು ಸದನದಲ್ಲಿ ಅನುಮತಿಯನ್ನು ಕೋರುತ್ತೇನೆ.

ಪ್ರತಿ ವರ್ಷ ನಾಯಿಗಳ ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡುವ ಸಂದರ್ಭದಲ್ಲಿ ರೇಬಿಸ್ ರೋಗ ನಿರೋಧಕ ಚುಚ್ಚುಮದ್ದನ್ನು ಪಾಲಿಕೆ ನೀಡುತ್ತಿದೆ. ಕಳೆದ ವರ್ಷ ಅನಿಮಲ್ ಬರ್ಥ್ ಕಂಟ್ರೋಲ್ (ಎಬಿಸಿ) ಸಮಯದಲ್ಲಿ 28,872 ನಾಯಿಗಳಿಗೆ ವಿವಿಧ ಸ್ವಯಂ ಸೇವಾ ಸಂಸ್ಥೆಯಿಂದ 309 ಹಾಗೂ ನಾಯಿಗಳ ಎಬಿಸಿ ಮಾಡುವವರು ಈ ವರ್ಷ 28,864 ನಾಯಿಗಳಿಗೆ ಆ್ಯಂಟಿ ರೇಬಿಸ್ ವ್ಯಾಕ್ಸಿನ್ (ಎಆರ್‌ವಿ) ನೀಡಿದ್ದಾರೆ. ಇದರ ಹೊರತಾಗಿ ಅಂದಾಜು 2.50 ಲಕ್ಷ ನಾಯಿಗಳಿಗೆ ಎಆರ್‌ವಿ ನೀಡುವುದು ಬಾಕಿ ಇದೆ ಎಂದು ಬಿಬಿಎಂಪಿಯ ಅಧಿಕಾರಿಗಳು ತಿಳಿಸಿದ್ದಾರೆ. ಈ ಅಂಕಿ ಅಂಶಗಳು ಆತಂಕಕ್ಕೆ ಕಾರಣವಾಗಿದೆ.

ಈ ರೇಬಿಸ್ ಕಾಯಿಲೆಯಿಂದ ರಾಜ್ಯದಲ್ಲಿ ಕಳೆದ ಒಂದು ತಿಂಗಳಿನಿಂದ 5 ಜನರು ಬಲಿಯಾಗಿದುದು ತಿಳಿದು ಬಂದಿರುತ್ತದೆ. ಬಹುಮುಖ್ಯವಾಗಿ ಅದರಲ್ಲೂ ರಾಜಧಾನಿಯಲ್ಲಿ 2 ಜನರು ಬಲಿಯಾಗಿದ್ದಾರೆ. ಹೀಗೆ ಎಆರ್‌ವಿ ಚುಚ್ಚುಮದ್ದು ನೀಡುವುದು ನಿರಂತರವಾಗಿ ನಡೆಯುವ ಪ್ರಕ್ರಿಯೆಯಾಗಿದ್ದು, ಲಸಿಕೆಯನ್ನು ಹಾಕಿದ ಬೀದಿ ನಾಯಿಗಳಿಗೆ ಸರಿಯಾದ ಅಳಿಸಿ ಹೋಗದಂತಹ ಬಣ್ಣವನ್ನು ಬಳಿಯಲು ಇನ್ನು ಯಾವುದೇ ಕ್ರಮ ಕೈಗೊಂಡಿಲ್ಲದಿರುವುದರಿಂದ ಯಾವ ನಾಯಿಗೆ ಚುಚ್ಚುಮದ್ದು ನೀಡಲಾಗಿದೆ ಅಥವಾ ಇಲ್ಲವೆಂದು ಖಚಿತವಾಗಿ ಹೇಳಲಾಗುವುದಿಲ್ಲ.

ಆದುದರಿಂದ, ಈ ಸದನದಲ್ಲಿ ತಮ್ಮನ್ನು ಕೇಳಿಕೊಳ್ಳುವುದೇನೆಂದರೆ, ಈ ರೇಬಿಸ್ ಕಾಯಿಲೆಗೆ ಬೀದಿ ನಾಯಿಗಳಿಗೆ ಲಸಿಕೆಗಳನ್ನು ನೀಡಿದ ನಾಯಿಗಳಿಗೆ ಶಾಶ್ವತವಾಗಿ ಉಳಿಯುವ ಬಣ್ಣಗಳನ್ನು ಬಳಿದು ರೇಬಿಸ್‌ನಿಂದ ಆಗುವ ಪರಿಣಾಮಗಳು ಹಾಗೂ ಎಚ್ಚರಿಕೆಯ ಬಗ್ಗೆ ಸಾರ್ವಜನಿಕರಿಗೆ ಸೂಕ್ತ ಪ್ರಕಟಣೆಗಳ ಮೂಲಕ ಅರಿವು ಮೂಡಿಸಲು ಸೂಕ್ತ ಕ್ರಮಕೈಗೊಳ್ಳಲು ಈ ಸದನದ ಮೂಲಕ ಸರ್ಕಾರವನ್ನು ಕೋರುತ್ತೇನೆ.

ಉತ್ತರ:

ಬಿಬಿಎಂಪಿ ವತಿಯಿಂದ ಹಾಲಿ ಇರುವ ಮೂಲಭೂತ ಸೌಕರ್ಯಗಳ ಎಬಿಸಿ-ಎಆರ್‌ವಿ ಕಾರ್ಯಕ್ರಮವನ್ನು ನಿರಂತರವಾಗಿ ನಡೆಸಲಾಗುತ್ತಿರುತ್ತದೆ. ಬಿಬಿಎಂಪಿ ವ್ಯಾಪ್ತಿಯಲ್ಲಿನ ಎಲ್ಲಾ ವಲಯಗಳಲ್ಲಿ 2019-20ರ ಸಾಲಿನಲ್ಲಿ ಜನವರಿ 2020 ರವರೆಗೆ ಒಟ್ಟು 31820 ಬೀದಿ ನಾಯಿಗಳಿಗೆ ಎಬಿಸಿ-ಎಆರ್‌ವಿ ಮಾಡಲಾಗಿರುತ್ತದೆ ಮತ್ತು 33033 ಬೀದಿ ನಾಯಿಗಳಿಗೆ ಎಆರ್‌ವಿ ಲಸಿಕೆಯನ್ನು ಮಾಡಲಾಗಿರುತ್ತದೆ. ಅಂದರೆ, ಒಟ್ಟು 64,853 ಬೀದಿ ನಾಯಿಗಳಿಗೆ ಎಆರ್‌ವಿ ಲಸಿಕೆಯನ್ನು ಮಾಡಲಾಗಿರುತ್ತದೆ. ಉಳಿದಂತಹ ಬೀದಿ ನಾಯಿಗಳಿಗೆ ಎಆರ್‌ವಿ ಲಸಿಕೆಯನ್ನು ಮಾಡುವ ಬಗ್ಗೆ ಮಾಸ್ ರೇಬಿಸ್ ವ್ಯಾಕ್ಸಿನೇಷನ್ (Mass Rabies Vaccination) ಕಾರ್ಯಕ್ರಮವನ್ನು ರೂಪಿಸಲಾಗಿರುತ್ತದೆ.

. . .2/-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬೀದಿ ನಾಯಿಗಳಿಗೆ ರೇಬೀಸ್ ರೋಗದ ವಿರುದ್ಧ ಎಆರ್‌ವಿ ಲಸಿಕೆಯನ್ನು ಹಾಕಿದ ನಂತರ ಆಯಿಲ್ ಪೈಂಟ್ (Oil Paint)ಅನ್ನು ಬಳಸಿ ಲಸಿಕೆ ನೀಡಿದ ನಾಯಿಗಳನ್ನು ಗುರುತಿಸಲಾಗುತ್ತದೆ. ಆದರೆ ಈ ಬಣ್ಣವು ಮೂರರಿಂದ ನಾಲ್ಕು ವಾರಗಳಷ್ಟು ಅವಧಿಗೆ ಮಾತ್ರ ಬಾಳಿಕೆ ಬರುತ್ತಿದ್ದು, ತದನಂತರ ಬಿಸಿಲು ಮಳೆಗೆ ಅಳಿಸಿ ಹೋಗುತ್ತಿರುವುದನ್ನು ಗಮನಿಸಲಾಗಿದ್ದು, ಇದಕ್ಕಾಗಿ ಬೀದಿ ನಾಯಿಗಳ ಕಿವಿಗಳ ಹಂಚಿನಲ್ಲಿ "V" ಆಕಾರದಲ್ಲಿ ಕತ್ತರಿಸಿದ ಗುರುತು ಶಾಶ್ವತವಾಗಿ ಇರುವಂತೆ ಗುರುತಿಸಿ, ಆ ನಾಯಿಗಳಿಗೆ ರೇಬೀಸ್ ರೋಗದ ವಿರುದ್ಧ ಲಸಿಕೆ ಹಾಕಿರುವುದು ಶಾಶ್ವತವಾಗಿ ಕಾಣುವಂತೆ ಮಾಡಲಾಗುತ್ತಿದೆ.

ಬಿಬಿಎಂಪಿ ವತಿಯಿಂದ ರೇಬೀಸ್ ರೋಗದ ಬಗ್ಗೆ ಜಾಗೃತಿ ಮೂಡಿಸಲು ಈಗಾಗಲೇ ಶಾಲೆಗಳಲ್ಲಿ, ವಾರ್ಡ್ ಮಟ್ಟದ ಸಭೆಗಳಲ್ಲಿ, ಸಾರ್ವಜನಿಕ ಪ್ರಕಟಣೆಗಳ ಮುಖಾಂತರ ಹಾಗೂ ಕರಪತ್ರಗಳನ್ನು ಹಂಚುವ ಮೂಲಕ ಜಾಗೃತಿ ಮೂಡಿಸುವ ಕಾರ್ಯಕ್ರಮ ನಿರಂತರವಾಗಿ ಬಿ.ಬಿ.ಎಂ.ಪಿ ವತಿಯಿಂದ ಚಾಲ್ತಿಯಲ್ಲಿರುತ್ತದೆ.

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಸಂಖ್ಯೆ: ನಅಇ 18 ಎಂಎನ್‌ವೈ 2020